VIJAYAKUMAR KANNUR
Digitally signed by VIJAYAKUMAR KANNUR
Date: 2025.06.27 17:11:50 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 27.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ ಎಸ್ ಕೆ.ವಕೀಲರಿಂದ</u>**

ನನ್ನ ಸ್ವಂತ ಊರು ಮೇಳ್ಳಿಗೇರಿ ಗ್ರಾಮ. ನಾನು ಒಕ್ಕಲತನ ಉದ್ಯೋಗ ಮಾಡುತ್ತೇನೆ. ನನ್ನದು 8 ಎಕರೆಯ ಜಮೀನು ಇರುವುದು. ಈ ಒಕ್ಕಲತನ ಉದ್ಯೋಗ ಹೊರತು ಪಡಿಸಿ ಬೇರೆ ಯಾವುದೇ ಉದ್ಯೋಗ ನಾನು ಮಾಡುವುದಿಲ್ಲ ಎಂದರೆ ಸರಿ. ಕಳೆದ 2-3 ವರ್ಷಗಳಿಂದಲೂ ಆರೋಪಿಯ ಪರಿಚಯ ನನಗೆ ಇರುವುದು. ಆರೋಪಿಯ ಊರು ಕಿತ್ತೂರು ಅಂತ ಹೇಳಿರುವನು. ಆರೋಪಿಯ ಕುಟುಂಬದ ಬಗ್ಗೆ ಮತ್ತು ಆತ ವಾಸವಾಗಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ಮತ್ತು ಆರೋಪಿಯ ಪರಿಚಯ ಮತ್ತು ಸ್ನೇಹ ಬೆಂಗಳೂರಿನಲ್ಲಿ ಆಗಿರುವುದು. ನಾನು ಮತ್ತು ಆರೋಪಿಯು ಕೆಲಸದ ನಿಮಿತ್ತ ವಿಧಾನ ಸೌದಕ್ಕೆ ಹೋದಾಗ ಪರಿಚಯ ಆಗಿರುವುದು.

2. ಈ ಮೊದಲು ನನ್ನ ಮತ್ತು ಆರೋಪಿಯ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಆರೋಪಿ 2024 ರ ಏಪ್ರಿಲ್ ತಿಂಗಳಲ್ಲಿ ನನಗೆ ಹಣ ಕೇಳಿರುವನು, ಆದರೆ ದಿನಾಂಕ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಈ ಹಣವನ್ನು ಆರೋಪಿ ನನಗೆ ಬೆಂಗಳೂರಿನಲ್ಲಿ ಕೇಳಿರುವನು. ಈ ಹಣ ಕೇಳಿದ 15-20 ದಿನಗಳ ನಂತರ ನಾನು ಕೊಡುವುದಾಗಿ ಎಂದು ಹೇಳಿರುವನು. ಅದೇ ರೀತಿ ಆರೋಪಿ ಮೇಲಿಂದ ಮೇಲೆ ಫೋನ್ ಮೂಲಕ ನನಗೆ ಈ ಹಣ ನೀಡುವಂತೆ ಕೇಳುತ್ತಿದ್ದನು. ಆರೋಪಿ ತಾನು ಮನೆ ಕಟ್ಟಬೇಕಾಗಿರುವುದು ಎಂದು ಹೇಳಿ ಈ ಹಣ ಕೇಳಿರುವನು. ಆರೋಪಿಯ ವ್ಯವಹಾರದ ಬಗ್ಗೆ ಮತ್ತು ಆತನ ಆರ್ಥಿಕ ಪರಿಸ್ಥಿತಿಯ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರಲಿಲ್ಲ. ಈ ಹಣವನ್ನು ಆರೋಪಿಗೆ ಬೆಂಗಳೂರಿನ ಗಾಂಧಿನಗರದ ರಾಯಲ್ ಲಾಡ್ಜನಲ್ಲಿ ನೀಡಿರುವೆನು. ಈ ಹಣವನ್ನು ಯಾವ ದಿನಾಂಕ, ತಿಂಗಳಂದು ನೀಡಿರುವೆನು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಆರೋಪಿಯ ಜೊತೆ ಹಣ ಪಡೆಯುವಾಗ ಯಮನಪ್ಪ ತಂದೆ ಕರಿಯಪ್ಪ ನಾಗವಗೋಳ ಎಂಬುವವರು ಹಾಜರು ಇದ್ದರು. ಇತ ನಮ್ಮ ಗ್ರಾಮದವನು ಆಗಿರುವನು. ಆರೋಪಿಗೆ ಈ ಹಣವನ್ನು ನಗದು ರೂಪದಲ್ಲೇ ನೀಡಿರುವೆನು.

ಆರೋಪಿ ನನಗೆ ಫೋನ್ ಮಾಡಿರುವುದರಿಂದ ಆ ಕಾರಣಕ್ಕೆ ನನ್ನ ಮನೆಯಲ್ಲಿ ಇದ್ದ ರೂ. 10 ಲಕ್ಷ ಹಣವನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಿದ್ದೇನು. ನಮ್ಮ ಮನೆಯಲ್ಲಿ ಖಾಯಂ ಆಗಿ ಇಷ್ಟು ಮೊತ್ತದ ಹಣವನ್ನು ಇಟ್ಟುಕೊಂಡಿರುತ್ತೇನೆ. ನಾನು ಆದಾಯ ತೆರಿಗೆಯ ಪಾವತಿಧಾರನಾಗಿರುವುದಿಲ್ಲ.

3. ನಾನು ಆರೋಪಿ ಮತ್ತು ಯಮನಪ್ಪ ಈ ಮೂರು ಜನರನ್ನು ಹೊರಡು ಪಡಿಸಿ ಬೆಂಗಳೂರಿನ ಲಾಡ್ಜನಲ್ಲಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಹಣ ನೀಡಿದ ಬಗ್ಗೆ ಯಾವುದೇ ದಾಖಲೆಯನ್ನು ಆರೋಪಿಯ ಕಡೆಯಿಂದ ಬರೆಸಿಕೊಂಡಿರುವುದಿಲ್ಲ. ಈ ವ್ಯವಹಾರಕ್ಕೆ ಸಂಬಂದಪಟ್ಟಂತೆ ನಿಪಿ 1 ರ ಚೆಕ್ ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಆರೋಪಿ ಮುಂದಿನ ದಿನಾಂಕ ನಮೂದು ಮಾಡಿ ಹಣ ಪಡೆಯುವ ಸಮಯದಲ್ಲಿ ಚೆಕ್ ನ್ನು ನೀಡಿರುವನು. ಹಣ ನಮೂದು ಮಾಡಿಯೇ ಆರೋಪಿ ಆ ಚೆಕ್ ನ್ನು ನೀಡಿರುವನು. ನಿಪಿ 1 ರ ಮೇಲಿನ ಆರೋಪಿಯ ಸಹಿಯನ್ನು ಹೊರತು ಪಡಿಸಿ ಉಳಿದ ಬರಹ ಆರೋಪಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಚೆಕ್ ನ ಮೇಲೆ ಬರೆಯುವ ಸಮಯದಲ್ಲಿ ಯಮನಪ್ಪ ಹಾಜರು ಇದ್ದನು. ಆರೋಪಿ ಮತ್ತು ನನಗೆ ಬೆಂಗಳೂರಿನಲ್ಲಿ ಪರಿಚಯವಾಗಿದ್ದು ನಂತರ ಆರೋಪಿ ನನಗೆ ಹಣ ನೀಡುವಂತೆ ವಿನಂತಿಸಿದ್ದು ಆ ಪ್ರಕಾರ ಬೆಂಗಳೂರಿನ ರಾಯಲ್ ಲಾಡ್ಜನಲ್ಲಿ ನಾನು ಆರೋಪಿಗೆ 10 ಲಕ್ಷ ಹಣ ನೀಡಿದ್ದು , ಆಗ ಆರೋಪಿ ನನಗೆ ನಿಪಿ 1 ರ ಚೆಕ್ ನ ಮೇಲೆ ಬರೆದು ನೀಡಿರುವನು ಎಂಬ ಸಂಗತಿ ಸಂಪೂರ್ಣ ಸುಳ್ಳು ಮತ್ತು ಖೊಟ್ಟಿಯಾಗಿರುವುದು ಎಂದರೆ ಸರಿಯಲ್ಲ.

4. ಆರೋಪಿ ಚೆಕ್ ನ ಮೇಲೆ ದಿನಾಂಕ 01.10.2024 ಅಂತ ನಮೂದು ಮಾಡಿ ನೀಡಿರುವನು. ಆರೋಪಿಗೆ ಹಣವನ್ನು ಮರಳಿ ನೀಡುವಂತೆ ಫೋನ್ ಮೂಲಕ ಕೇಳಿದಾಗ ಆತ ಫೋನ್ ನ್ನು ತೆಗೆದುಕೊಂಡಿರುವುದಿಲ್ಲ. ನಾನು ಆರೋಪಿಯ ವಾಸವಾಗಿರುವ ಸ್ಥಳಕ್ಕೆ ಮತ್ತು ಆತನ ಮನೆಗೆ ನಾನು ಹೋಗಿರುವುದಿಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಸ್ನೇಹ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಈ ದೂರಿನಲ್ಲಿ ಹೇಳಿರುವಂತೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಈ ಹಣವನ್ನು ಮರಳಿ ನೀಡುವ ಸಲುವಾಗಿ ನಿಪಿ 1 ರಂತೆ ಚೆಕ್ ನ್ನು ನೀಡಿರುವನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ 1 ರ ಚೆಕ್ ನ್ನು ನಗಧೀಕರಣಕ್ಕಾಗಿ 01.10.2024 ರಂದು Indian Bank, Halagali ಶಾಖೆಯಲ್ಲಿ ಹಾಜರು ಪಡಿಸಿರುವೆನು. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಮೂರು ದಿನಗಳ ನಂತರ ಮರಳಿ ಬಂದಿರುವದು. ನಂತರ ವಕೀಲರ ಮೂಲಕ ಆರೋಪಿಗೆ ನೋಟಿಸ್ ಕಳುಹಿಸಿಕೊಟ್ಟಿರುವೆನು. ಆರೋಪಿ ಆ ನೋಟಿಸ್ ಗೆ ಪ್ರತ್ಯುತ್ತರ ನೀಡಿರುವನು ಎಂದರೆ ಸರಿ. ಆ ಪ್ರತ್ಯುತ್ತರದಲ್ಲಿನ ಸಂಗತಿಗಳು ನನಗೆ ಗೊತ್ತಿರುವವು. ಆರೋಪಿ ಮತ್ತು ಯಮನಪ್ಪ ಎಂಬುವವರು ಬೆಂಗಳೂರಿಗೆ ಹೋದಾಗ ಆರೋಪಿಯ ಚೆಕ್ ನ್ನು ಯಮನಪ್ಪ ಕಳ್ಳತನ ಮಾಡಿಕೊಂಡು ಬಂದು ನನಗೆ ನೀಡಿರುವನು ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಯ ಪರಿಚಯ ಇರದೇ ಇದ್ದರೂ ಸಹಿತ ಆ ಚೆಕ್ ನ ಮೇಲೆ ಹಣವನ್ನು ನಾನೇ ನಮೂದು ಮಾಡಿಕೊಂಡು ಅದನ್ನು ನಗಧೀಕರಣಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ಚೆಕ್ ನ ನಂಬರ್ ನನಗೆ ನೆನಪಿರುವುದಿಲ್ಲ. ಚೆಕ್ ಕ್ರಮ ನಂ. 161111 ಹಾಗೂ 161112 ಈ ಎರಡು ಚೆಕ್ ಗಳನ್ನು ಆರೋಪಿಯ ಕಡೆಯಿಂದ ಯಮನಪ್ಪ ಕಳ್ಳತನ ಮಾಡಿರುವನು ಎಂದರೆ ಸರಿಯಲ್ಲ. ಯಮನಪ್ಪ ಮತ್ತು ನಾನು ಕೂಡಿಕೊಂಡು ಈ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಯಮನಪ್ಪನನ್ನು ಈ ಪ್ರಕಣದಲ್ಲಿ ಸಾಕ್ಷಿಯನ್ನಾಗಿ ವಿಚಾರಣೆ ಮಾಡಿಸುತ್ತೇನೆ.

6. ಆರೋಪಿ ಈ ಎರಡು ಚೆಕ್ ಗಳು ಕಳ್ಳತನ ಆಗಿರುವ ಬಗ್ಗೆ ಯಮನಪ್ಪನ ವಿರುದ್ಧ ದೂರು ದಾಖಲು ಮಾಡಿರುವನು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿ ಮತ್ತು ನನ್ನ ಮಧ್ಯ ಯಾವುದೇ ಪರಿಚಯ ಮತ್ತು ಸ್ನೇಹ ಹಾಗೂ ಯಾವುದೇ ಹಣಕಾಸಿನ ವ್ಯವಹಾರ ಸಹ ಇರುವುದಿಲ್ಲ, ಆತನ ವಿರುದ್ದ ಈ ಖೊಟ್ಟಿ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದೂರು ದಾಖಲು ಮಾಡಲು ನನಗೆ ಯಾವುದೇ ಹಕ್ಕು ಸಹ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ದಾಖಲು ಮಾಡಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. ) ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.27 17:11:59 +0530

ಸಾಕ್ಷಿಯ ಸಹಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ